# ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 602/2025**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿತರು ಃ ಸೂಗಪ್ಪ ಮತ್ತು ಇತರರು.**

## ದೋಷಾರೋಪಣೆ

**ಆರೋಪಿತರುಃ**

1. ಸೂಗಪ್ಪ ತಂದೆ ಬಸಣ್ಣ ಶೇಖಸಿಂಧಿ,
2. ಬಂದಪ್ಪ ತಂದೆ ಬಸಣ್ಣ ಶೇಖಸಿಂಧಿ,
3. ಬಸವರಾಜ @ ಬಸಪ್ಪ ತಂದೆ ಸೂಗಪ್ಪ ಶೇಖಸಿಂಧಿ,
4. ಸಾಬರೆಡ್ಡಿ ತಂದೆ ಬಾಬು ಶೇಖಸಿಂಧಿ,

ಎಲ್ಲಾರು ಸಾಃ ರಾಂಪೂರ.ಕೆ ಗ್ರಾಮ,
ತಾಃ ಮತ್ತು ಜಿಃ ಯಾದಗರಿ.

**ಆರೋಪಿತರಾದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ,**

ದಿನಾಂಕ 28.12.2024 ರಂದು ಬೆಃ 09-00 ಗಂಟೆ ಸುಮಾರಿಗೆ ಸೈದಾಪೂರ ಪೋಲಿಸ್ ಠಾಣೆ ಸರಹದ್ದಿಲ್ಲಿ ಬರುವ ರಾಂಪೂರ ರೋಡಿನ ಮೇಲೆ ಚಾಸಾಃ1 ರವರ

ಜಮೀನು ಸರ್ವೆ ನಂಬರ 11 ಮತ್ತು 12 ರಲ್ಲಿ ಕರೆಂಟ್ ಮೋಟಾರ ಹಚ್ಚಿ ನೀರು ಬಿಡುತ್ತಾ ರೋಡಿನ ಮೇಲೆ ನಿಂತಿದ್ದಾಗ ಆರೋಪಿತರಾದ ನೀವು ಸದರಿ ಜಮೀನುದಲ್ಲಿನ ಕರೆಂಟ ಮೋಟಾರ ಸ್ಟಾರ್ಟರ ಹತ್ತಿರ ಹೋಗಿ ಫ್ಯೂಜ್ಯ ಕಿತ್ತಿಕೊಂಡು ಹೊರಟಾಗ ಕರೆಂಟ್ ಮೋಟಾರ ಯಾಕೆ ಕಿತ್ತೀದ್ದಿರಿ ಅಂತಾ ಚಾಸಾಃ1 ರವರು ಕೇಳಿದಾಗ ಆರೋಪಿತರಾದ ನೀವು ಸಿಟ್ಟಿಗೆ ಬಂದು ಸೂಳೇ ಮಗನೆ ರಂಡಿ ಮಗನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.351(2) ಸಹ ಕಲಂ. 3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**2.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ನೀವು ಅಪರಾಧ ಮಾಡುವ ಉದ್ದೇಶದಿಂದ 1 ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಕೈ ಬಿಗಿಯಾಗಿ ಹಿಡಿದುಕೊಂಡಾಗ 2 ನೇ ಆರೋಪಿಯಾದ ನೀನು ಕೈಯಲ್ಲಿದ್ದ ಕರೆಂಟ ಫ್ಯೂಜನಿಂದ ತಲೆಗೆ ಹಾಗೂ ಎರಡೂ ಭುಜಗಳಿಗೆ ಹೊಡೆದಿದ್ದು, 3 ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಅಲ್ಲೆ ಬಿದ್ದಿದ್ದ ಕಟ್ಟಿಗೆಯಿಂದ ಎರಡೂ ಕೈಗಳಿಗೆ ಹೊಡೆದಿದ್ದರಿಂದ ಬಲಗೈ ತೋರುಬೆರಳಿಗೆ ರಕ್ತಗಾಯವಾಗಿದ್ದು, ಎಡಗೈ ಹೆಬ್ಬಟ್ಟಿಗೆ ಭಾರಿ ರಕ್ತಗಾಯವಾಗಿ ಮೂಳೆ ಮುರಿದಂತಾಗಿರುದ್ದು, ಹಾಗೂ ಎಡಗೈ ಹಸ್ತದ ಮಣಿಕಟ್ಟಿನ ಹತ್ತಿರ ಭಾರಿ ಒಳಪೆಟ್ಟಾಗಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.118(2) ಸಹ ಕಲಂ.3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**3.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, 4 ನೇ ಆರೋಪಿಯಾದ ನೀನು ಚಾಸಾಃ 1 ರವರಿಗೆ ಟೊಂಕಕ್ಕೆ ಮತ್ತು ಎರಡೂ ಕಾಲುಗಳಿಗೆ ಒದಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.118(1) ಸಹ ಕಲಂ.3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**4.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಚಾಸಾಃ 1 ರವರಿಗೆ ಇವತ್ತು ನಮ್ಮ ಕೈಯಲ್ಲಿ ಉಳಿದಿರುವೆ ಮಗನೇ ಮತ್ತೆ ಸಿಕ್ಕರೇ ನಿನ್ನ ಖಲಾಸ ಮಾಡಿಯೇ ಹೋಗುತ್ತೇನೆ ಅಂತಾ ಜೀವ ಬೆದರಿಕ ಹಾಕಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.352 ಸಹ ಕಲಂ.3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 17-09-2025**
**ಸ್ಥಳಃ ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ಯಾದಗಿರಿ.**